# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂಖ್ಯೆ: ಬಿ12(6)ಪಿಆರ್/ಇ-11365/21-22

ಮುಖ್ಯ ಆಯುಕ್ತರವರ ಕಛೇರಿ
ಬೃಹತ್ ಮಹಾನಗರ ಪಾಲಿಕೆ ಕಛೇರಿಗಳು
ಬೆಂಗಳೂರು, ದಿನಾಂಕ: 2/8/21

**ಕಛೇರಿ ಆದೇಶ**

ವಿಷಯ : ಮುಖ್ಯ ನಗರ ಯೋಜಕರು ರವರಿಗೆ ಸ್ಥಳನಿಯುಕ್ತಿಗೊಳಿಸುವ ಬಗ್ಗೆ.

ಉಲ್ಲೇಖ: 1) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3) ರವರ ಸಂಖ್ಯೆ: ಸಿಆಸು 31 ಎಸ್‌ಹೆಚ್‌ಡಿ 2020, ದಿ: 19-03-2021
2) **ಶ್ರೀ ಸುನಿಲ್ ಕುಮಾರ್ ಪಿ, ನಿರ್ದೇಶಕರು**, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ , ರವರ **ಹಾಜರಾತಿ ದಿನಾಂಕ**: 22-03-2021
3) **ಸರ್ಕಾರದ ನಗರಾಭಿವೃದ್ಧಿ ಇಲಾಖೆಯ** ಅಧಿಸೂಚನೆ ಸಂಖ್ಯೆ: ನಅಇ 207 ಎಂಎನ್‌ಯು 2021 ದಿನಾಂಕ: 27-07-2021
4) ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರ ಸಂಖ್ಯೆ: ನಅಇ 207 ಎಂಎನ್‌ಯು 2021 ದಿನಾಂಕ: 27-07-2021

------------

ಶ್ರೀ ಸುನಿಲ್ ಕುಮಾರ್ ಪಿ, ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನಾ ಇಲಾಖೆ ಇವರ ಸೇವೆಯನ್ನು ಉಲ್ಲೇಖ-(1)ರ ಸರ್ಕಾರದ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ (ಸೇವೆಗಳು-3) ರವರ ಅಧಿಸೂಚನೆಯಲ್ಲಿ ಪಾಲಿಕೆಗೆ ಮುಖ್ಯ ನಗರ ಯೋಜಕರ ಹುದ್ದೆಗೆ ನಿಯೋಜಿಸಿರುವ ಮೇರೆಗೆ, ಸದರಿ ಅಧಿಕಾರಿಯವರು ಉಲ್ಲೇಖ-(2)ರಂತೆ ಪಾಲಿಕೆಯಲ್ಲಿ ಹಾಜರಾತಿ ಸಲ್ಲಿಸಿರುವುದನ್ನು ಪರಿಗಣಿಸಿ, ಉಲ್ಲೇಖ-(3)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಆದೇಶದಂತೆ ಪಾಲಿಕೆಗೆ ಹೊಸದಾಗಿ ಸೃಜನೆಯಾಗಿರುವ ಮುಖ್ಯ ನಗರಯೋಜಕರ (Chief Town Planner) ಹುದ್ದೆಯಲ್ಲಿ ಈ ಕೆಳಕಂಡ ಷರತ್ತಿಗೊಳಪಡಿಸಿ ಕಾರ್ಯನಿರ್ವಹಿಸಲು ನೇಮಿಸಿ ಆದೇಶಿಸಿದೆ.

ಹಾಗೂ ಉಲ್ಲೇಖ-(4)ರ ಸರ್ಕಾರದ ನಗರಾಭಿವೃದ್ಧಿ ಇಲಾಖೆಯ ಪತ್ರದನ್ವಯ ಸದರಿ ಅಧಿಕಾರಿಯವರು ಪಾಲಿಕೆಯಲ್ಲಿ ವರದಿ ಮಾಡಿಕೊಂಡ ದಿನಾಂಕ: 22-03-2021ರಿಂದ ವೇತನ ಪಾವತಿಸಲು ಅಗತ್ಯ ಕ್ರಮ ಕೈಗೊಳ್ಳುವಂತೆ ಬಟವಾಡೆ ಅಧಿಕಾರಿಯವರಿಗೆ ಸೂಚಿಸಿದೆ.

**ಷರತ್ತುಗಳು:**

1) ಇವರ ಸೇವೆಯು ತೃಪ್ತಿಕರವಾಗಿಲ್ಲದಿದ್ದರೆ ಮುನ್ಸೂಚನೆ ಇಲ್ಲದ ಇವರನ್ನು **ಬಿಡುಗಡೆಗೊಳಿಸುವ** ಹಕ್ಕನ್ನು ಬಿ.ಬಿ.ಎಂ.ಪಿ.ಯು ಕಾಯ್ದಿರಿಸಿಕೊಂಡಿರುವ ಷರತ್ತಿಗೊಳಪಡಿಸಿದೆ.
2) ಸದರಿ ಅಧಿಕಾರಿಯವರು ಮುಂದೆ ಪಾಲಿಕೆಯಲ್ಲಿ ತಮ್ಮನ್ನು **ವಿಲೀನಗೊಳಿಸುವಂತೆ** ನ್ಯಾಯಾಲಯದಲ್ಲಿ ಯಾವುದೇ ದಾವೆ ಹೂಡಬಾರದೆಂಬ ಷರತ್ತಿಗೊಳಪಡಿಸಿದೆ.

ಮೇಲ್ಕಂಡ ಆದೇಶದನ್ವಯ ಸದರಿ ಮುಖ್ಯ ನಗರ ಯೋಜಕರು ರವರು **ನೇಮಿಸಿರುವ** ಸ್ಥಳದಲ್ಲಿ ಕೂಡಲೇ ವರದಿ ಮಾಡಿಕೊಂಡು ಸಿ.ಟಿ.ಸಿ ಪ್ರತಿಯನ್ನು ಈ ಕಛೇರಿಗೆ ಸಲ್ಲಿಸಲು **ಸೂಚಿಸಿದೆ.**

ಮಾನ್ಯ ಮುಖ್ಯ ಆಯುಕ್ತರು ರವರ ಆದೇಶದ ಮೇರೆಗೆ)

ಉಪ ಆಯುಕ್ತರು **(ಆಡಳಿತ)**
ಬೃಹತ್ ಬೆಂಗಳೂರು ಮಹಾನಗರ **ಪಾಲಿಕೆ**
2/8/2021

ಪ್ರತಿಯನ್ನು:

ಮಾನ್ಯ ಆಡಳಿತಗಾರರು ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
ಮಾನ್ಯ ಮುಖ್ಯ ಆಯುಕ್ತರು ರವರ ಅವಗಾಹನೆಗೆ ತರಲು ಆಪ್ತ ಕಾರ್ಯಾಲಯಕ್ಕೆ ಕಳುಹಿಸಿದೆ
ಮಾನ್ಯ ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಕಳುಹಿಸಿದೆ.
ಸರ್ಕಾರದ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಕಳುಹಿಸಿದೆ.
ಸರ್ಕಾರದ ಅಧೀನ ಕಾರ್ಯದರ್ಶಿಗಳು, ನಗರಾಭಿವೃದ್ಧಿ ಇಲಾಖೆ, ವಿಕಾಸ ಸೌಧ, ಬೆಂಗಳೂರು ರವರಿಗೆ ಕಳುಹಿಸಿದೆ
ನಿರ್ದೇಶಕರು, ನಗರ ಮತ್ತು ಗ್ರಾಮಾಂತರ ಯೋಜನೆ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂ. ರವರಿಗೆ ಕಳುಹಿಸಿದೆ.
ಮುಖ್ಯ ನಗರ ಯೋಜಕರು, / ಅಪರ ನಿರ್ದೇಶಕರು (ನಗರ ಯೋಜನೆ) ರವರಿಗೆ ಕಳುಹಿಸಿದೆ
ಜಂಟಿ ನಿರ್ದೇಶಕರು (ನಗರಯೋಜನೆ-ಉತ್ತರ / ದಕ್ಷಿಣ) ರವರಿಗೆ ಕಳುಹಿಸಿದೆ
ಜಂಟಿ ನಿರ್ದೇಶಕರು (ಬಿ.ಎಂ.ಐ.ಸಿ.ಎ.ಪಿ.ಎ) ರವರಿಗೆ ಕಳುಹಿಸಿದೆ
ಮು.ಲೆ.ಅ / ಮು.ಲೆ.ಪ ರವರಿಗೆ / ಆಹರಣ ನಿಯಂತ್ರಕರು (ಹಣಕಾಸು-ಕೇಂದ್ರ) ರವರಿಗೆ ಕಳುಹಿಸಿದೆ
ಸಂಬಂಧಪಟ್ಟ ಅಧಿಕಾರಿ ರವರಿಗೆ / ಕಛೇರಿ ಪ್ರತಿ